# ಬೆಟ್ಟದಂತಹ ಹೆಂಡತಿ, ನಿರ್ಝರಿಯಂತಹ ಗಂಡ!

ಇವರು ಹಾಡುಗಾರ್ತಿ. ಯಾವುದೇ ಗಾಯನಸ್ಪರ್ಧೆಗಳಿಗೆ ಹೋದರೂ ಉಳಿದ ಸ್ಪರ್ಧಿಗಳೆಲ್ಲ ಈಕೆಯನ್ನು ನೋಡಿ ಒಳಗೊಳಗೇ ನಗುತ್ತಿದ್ದರಂತೆ. ಕೆಲವರಂತೂ ಇವರ ಬಳಿ ಕೇಳಿಯೇ ಬಿಡುತ್ತಿದ್ದರಂತೆ, "ಮೇಡಂ, ನೀವು ಹಾಡ್ಲಿಕ್ಕೆ ಬಂದಿರೋದಾ?". ಇವರು ಕಣ್ಣಲ್ಲೇ ಮೌನವಾಗಿ(!) ಗಹಗಹಿಸಿ ನಕ್ಕು ಹೌದೆಂಬಂತೆ ತಲೆಯಾಡಿಸುತ್ತಿದ್ದರಂತೆ. ಸ್ಪರ್ಧೆ ಮುಗಿದು, ಮೊದಲ ಬಹುಮಾನ ಇವರಿಗೇ ಬಂದಾಗ ಅವರೆಲ್ಲ – ಈ ಸಾದಾ ಸೀದಾ, ಎಣ್ಣೆಗಪ್ಪು, ತರಕು–ಗುಂಗುರು ಕೂದಲಿನ ಗುಂಡಮ್ಮನೊಳಗೆ ಇಂಥಾ ಗಾಯಕಿಯಿದ್ದಾಳೆಯೇ ಎಂದು ಅಚ್ಚರಿಗೊಳಗಾಗುತ್ತಿದ್ದರಂತೆ; ನಾಚಿಕೆಯ ಮುಖ ಮಾಡಿಕೊಂಡು ಬಂದು ಇವರಿಗೆ ಅಭಿನಂದನೆಗಳನ್ನು ಹೇಳಿಹೋಗುತ್ತಿದ್ದರಂತೆ.

ಈಕೆಯ ಪತಿ ಉತ್ತರ ಕನ್ನಡದ ಕಡೆಯವರು. ತುಂಬಾ ಮೃದು, ಕಡಿಮೆ ಮಾತು, ಆದರ್ಶವಾದಿ. ಆದರ್ಶಗಳೆಂದರೆ ಅವರಿಗೆ ಭಾಷಣದ ವಸ್ತುವಲ್ಲ. ಯಾರಿಗೂ ಅವುಗಳ ಬಗ್ಗೆ ಬೋಧನೆ ನೀಡದೇ ತನ್ನ ಜೀವನದಲ್ಲಿ, ನಡೆ–ನುಡಿಯಲ್ಲಿ ತಾನು ನಂಬಿದ ಆದರ್ಶಗಳನ್ನು ಪಾಲಿಸಿಕೊಂಡು ಬಂದವರು. ಅವರ ಓದು ಮುಗಿದು, 'ಮದುವೆಯಾಗು, ಮದುವೆಯಾಗು' ಎಂದು ಮನೆಯವರು ವರಾತ ಶುರುಹಚ್ಚಿಕೊಂಡಾಗ ಅವರು ಒಂದು ಪ್ರಶ್ನಾವಳಿಯನ್ನು ಸಿದ್ಧಪಡಿಸಿಕೊಂಡರು! ಈ ಇಂಟರ್‌ವ್ಯೂನಲ್ಲಿ ಯಾವ ಹುಡುಗಿ ಪಾಸ್ ಆಗ್ತಾಳೋ ಅವಳೊಂದಿಗೆ ತನ್ನ ಮದುವೆ ಎಂದರು! ಕೊನೆಗೆ ಆ ಇಂಟರ್‌ವ್ಯೂ ಪಾಸ್ ಮಾಡಿ ಉತ್ತರ–ಕನ್ನಡದ ತೆಳ್ಳಗಿನ ಬೆಳ್ಳಗಿನ, ಮೃದು ಮಾತಿನ 'ಸರ್'ನ್ನು ಸರಳವಾಗಿ ಮದುವೆಯಾದದ್ದು ಈ ಧಾರವಾಡದ, ಒರಟು ಬೆಟ್ಟದಂತಹ ಮೇಡಂ!

ಇವರ ಪರಿಚಯ ನನಗಾಗಿದ್ದು ನನ್ನೊಬ್ಬ ಆತ್ಮ–ಸ್ನೇಹಿತೆಯ ಮೂಲಕ. ಇವಳು ಶಿಕ್ಷಕಿಯಾಗಿ ಕೆಲಸಮಾಡುತ್ತಿರುವ ಸ್ಕೂಲಿನಲ್ಲೇ ಅವರೂ ಸಹ ಶಿಕ್ಷಕಿ, ಪತಿ ನಾನು ಓದಿದ್ದ ಸ್ಕೂಲಿನಲ್ಲೇ ಶಿಕ್ಷಕ. ಮೊದಲ ಭೇಟಿಗೇ ಆಪ್ತವೆನಿಸಿದ್ದು ಮೇಡಂನ ಬಡಿವಾರವಿಲ್ಲದ 'ನೀನು ನಾನು' ಮಾತು, ಪಕಪಕ ನಗು, ತುಂಬಾ ಗೇಲಿಮಾಡುವ, ಗೇಲಿಗೊಳಗಾಗುವ ಗುಣ. ಮತ್ತು ಇದೆಲ್ಲಕ್ಕಿಂತ ಎಲ್ಲಕ್ಕಿಂತ ಮುಖ್ಯವಾಗಿ ನನ್ನನ್ನು ಸೆಳೆದದ್ದು ಎಂದರೆ ಅವರ ಮದುವೆ.

ಆಗಲೇ ಹೇಳಿದಂತೆ ಇವರದು ಇಂಟರ್ವ್ಯೂ ಮದುವೆ! ಮದುವೆಯಾದರೂ ಅವರಿಗೆ ಇವರು 'ಮೇಡಂ' ಮತ್ತು ಇವರಿಗೆ ಅವರು 'ಸಾರ್'. ಮೊದಲೆಲ್ಲ ಇವರಿಬ್ಬರು ಪತಿಯ ಊರಿಗೆ ಹೋದಾಗ ಅಲ್ಲಿಯವರಿಗೆ "ಇವನೇನು? ತನ್ನ ಹೆಂಡತಿಯನ್ನೇ 'ಮೇಡಂ', 'ಹೋಗಿ–ಬನ್ನಿ' ಅಂತೆಲ್ಲ ಮಾತನಾಡಿಸ್ತಾನಲ್ಲ" ಅನ್ನೋ ಇರುಸು–ಮುರುಸು! ಅದೆಲ್ಲ 'ಸರ್'ಗೆ ಗೊತ್ತಾಗಿ, ಈಗೆಲ್ಲ ಊರಿಗೆ ಹೋದರೆ ನೆಂಟರಿಷ್ಟರ ಮುಂದೆ ಮಾತ್ರ ಸರ್ ಇವರನ್ನು ಜಬರ್ದಸ್ತಿನಿಂದ "ಮಂಜುಳಾ, ಹೋಗೇ, ಬಾರೇ" ಅಂತೆಲ್ಲ ಕರೆಯುವುದು, ಆನಂತರ ಏಕಾಂತದಲ್ಲಿ "ಸಾರಿ ಮೇಡಂ, ಏಕವಚನದಲ್ಲಿ ಮಾತನಾಡ್ದೆ ಅಂತಾ ಬೇಜಾರ್ ಮಾಡ್ಕೋಬೇಡಿ" ಅಂತ ಕ್ಷಮಾಯಾಚನೆ ಮಾಡುವುದು ನಡೆಯುತ್ತದೆ! ಮೇಡಂಗೆ ಮಾತ್ರ ಇವೆಲ್ಲ ಪತಿಯನ್ನು ಗೇಲಿಮಾಡಲು ಸಿಕ್ಕ ಹೊಸ ಅಸ್ತ್ರಗಳು!

ಮೌನವಾಗಿ ಗಹಗಹಿಸಿ ನಗುವುದು ಎಂದೆನಲ್ಲಾ? ಇವರನ್ನು ಭೇಟಿಮಾಡಿದ ಮೇಲೆಯೇ ನನಗೆ ಆ ಉಪಮೆ ಹೊಳೆದದ್ದು! ಇವರು ಮೌನವಾಗಿ ನಗುತ್ತಿರುವ ಮುಖನೋಡಿದರೆ ನನಗೆ ಇವರು ನಸುನಗುತ್ತಿದ್ದಾರೆ ಎನಿಸುವುದೇ ಇಲ್ಲ, ಹಲ್ಲು ಕಿರಿಯದೇ ಗಹಗಹಿಸುತ್ತಿದ್ದಾರೆ ಅಂತಲೇ ಅನಿಸುವುದು, ಹಾಗಿದೆ ಇವರ ನಗು! ಇನ್ನು ಬಾಯಿಬಿಟ್ಟು ನಕ್ಕರೋ, ಅದು ಮೌನ ಮುರಿದ ಗಹಗಹಿಸುವಿಕೆ!

ಗುಂಡಮ್ಮ ಎಂದೆನಲ್ಲ, ಅದು ಮೇಡಂನ ಅಮ್ಮನ ಹೆಸರು ಕೂಡ! ಆಕೆ ತುಂಬಾ ಹೆಸರುವಾಸಿಯಾದ ಗಝಲ್ ಹಾಡುಗಾರ್ತಿ (ಗಝಲ್ ಗುಂಡಮ್ಮ). ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ, ಪುರಸ್ಕಾರಗಳಿಗೆ ಭಾಜನರಾಗಿರುವ ಗುಂಡಮ್ಮನ ಮನೆ ಮಕ್ಕಳಿಗೆಲ್ಲ ಸಂಗೀತ ಸರಾಗ. ಮೇಡಂ ಹಾರ್ಮೋನಿಯಂ ಮೀಟಿದರೂ ರಾಗ, ತಬಲಾ ಹಿಡಿದರೂ ತೋಂತನನ...

ಮೊಟ್ಟ ಮೊದಲು ಭೇಟಿಯಾದಾಗ ಅವರದೊಂದು ಸಣ್ಣ ಕೆಲಸ ಮಾಡಿಕೊಂಡು ಬರಲು ಹೇಳಿದ್ದರು. ವರ್ಷಾನುಗಾಲ ಕಾಯಿಸಿ, ಕೆಲಸ ಮಾಡಿಕೊಂಡು ಹೋದಾಗ, "ದುಡ್ಡೆಷ್ಟಾಯಿತು, ಹೇಳು?" ಅಂತ ಪೀಡಿಸಿದರು. "ಅದೆಲ್ಲ ಬೇಡ, ನಿಮ್ಮದೊಂದು ಖಾಸಗೀ ಗಾಯನ ಕಚೇರಿ ನಡೆಯಲಿ" ಅಂದೆ. ಸರೀ ಹಾರ್ಮೋನಿಯಂ, ತಬಲಾಗಳನ್ನಿಟ್ಟುಕೊಂಡು ಹಾಡಿಯೇ ಹಾಡಿದರು, "ನಾಲ್ ಮಿಲೇ ನದೀಕೆ ಜಲ್ ಮೇ", "ಲೋಕದ ಕಣ್ಣಿಗೆ ರಾಧೆಯೂ ಕೂಡಾ", "ಸಯ್ಯಾ ಬಿನಾ ಘರ್ ಸೂನಾ.." ಕೊನೆಯಲ್ಲೊಮ್ಮೆ ಆಲಾಪ ಎತ್ತಿಯೇ ಬಿಟ್ಟರಲ್ಲ, "ಹೂವೇ ಹೂವೇ..." ನನಗೆ ರಸಭಂಗವಾಯಿತು. ಆಗ ಏನನ್ನೂ ಹೇಳಲಿಲ್ಲ, ಮತ್ತೊಮ್ಮೆ ನನ್ನ

ಸ್ನೇಹಿತೆ ಫೋನ್ ಮಾಡಿದಾಗೆ ಅವಳೊಂದಿಗೆ ನನಗಾದ ಕಿರಿಕಿರಿಯ ಬಗ್ಗೆ ಹೇಳಿಕೊಂಡೆ, ಅವಳು "ಅವರಿಗೇ ಫೋನ್ ಮಾಡಿ ಹೇಳೋ, ಅವ್ರೇನೂ ಅನ್ಕೊಳ್ಳೊಲ್ಲ, ಪಾಪ!" ಅಂದಳು. ಸರಿ, ಮುಂದೊಮ್ಮೆ ಯಾವಾಗಲೋ ಮೇಡಂಗೆ ಫೋನ್ ಮಾಡಿದಾಗ ಸುಮ್ಮನಿರಲಾರದೇ ಒದರಿಯೇ ಬಿಟ್ಟೆ, "ಎಂತ ಮೇಡಂ? ಇಂದಿನ ಸಿನೆಮಾ ಹಾಡು ಯಾರು ಬೇಕಾದ್ರೂ ಹಾಡ್ತಾರೆ, ನಿಮ್ಮ ಶಾರೀರಕ್ಕೆ ಅಂತಾ ಹಾಡುಗಳನ್ನು ಹಾಡುವುದು ಅವಮಾನ!" "ಹೌದೇನೋ? ಹಾಗಂತೀಯಾ? ಇರ್ಲೀ ಬಿಡು ನೆಕ್ಸ್ಟ್ ಸಲ ಬಂದಾಗ ನಿನಗಿಷ್ಟಬಂದವನ್ನೇ ಹಾಡ್ತೀನಿ" ಅಂದರು. "ಈ ಸಲಕ್ಕೆ ನಿಮಗೊಂದು ದೊಡ್ಡ ಶಿಕ್ಷೆ ಕಾದಿದೆ" ಅಂತ ನಕ್ಕೆ.

ಆಮೇಲೆ, ಅಲ್ಲಿ ಇಲ್ಲಿ ಹುಡುಕಿ ಲತಾ ಮಂಗೇಶ್ಕರ್, ಗೀತಾ ದತ್, ಆಶಾ, ಮುಂತಾದವರು ಹಾಡಿದ್ದ, ನನಗಿಷ್ಟವಾದ, ಹಾಡಲು ನಿಜವಾಗಿಯೂ ಪ್ರೌಢಿಮೆ ಬೇಕಾಗಿದ್ದ ಹಾಡುಗಳನ್ನು ಕಲೆಹಾಕಿ, ಸಿಡಿ ತಯಾರಿಸಿಕೊಂಡು, ಒಂದು ನೋಟ್ ಪುಸ್ತಕದಲ್ಲಿ ಸಾಧ್ಯವಾದಷ್ಟು ಹಾಡುಗಳಿಗೆ ಸಾಹಿತ್ಯವನ್ನೂ ಬರೆದಿಟ್ಟುಕೊಂಡು ತಯಾರಾದೆ, ನನ್ನ ಸ್ನೇಹಿತೆ ಫೋನ್ ಮಾಡಿದಳು, "ಏ, ಮಂಜುಳಾ ಮೇಡಂ ಒಂದು ಹೆಣ್ಮಗು ದತ್ತು ತಗೊಂಡಿದಾರೆ ಕಣೋ!"

'ಸರ್'ರ ಆದರ್ಶ, ಕಟ್ಟುಪಾಡುಗಳು ಎಲ್ಲವೂ ನೆನಪಾಗಿ ನನ್ನೊಳಗೆ ಹುಟ್ಟಿದ ಪ್ರಶ್ನೆಯನ್ನೂ, ಕಳಕಳಿಯನ್ನೂ ಅವಳಿಗೆ ಹೇಳಿದೆ, ಅವಳು ಮತ್ತದೇ "ಮೇಡಂಗೇ ಹೇಳೋ" ರಾಗ ಹಾಡಿದಳು. ನಂತರ ಮೇಡಂ ಫೋನ್ ಮಾಡಿ, "ನನ್ನ ಮಗಳನ್ನು ನೋಡಲು ಬರೋದಿಲ್ಲವೇನ್ರೋ ಪಾಪಿಗಳಾ" ಎಂದಾಗ ಅವರಿಗೂ ನನ್ನ ಮನಸಿನಲ್ಲಿದ್ದುದನ್ನು ಹೇಳಿದೆ. ಅವರು ಗಹಗಹಿಸಿ ನಕ್ಕು "ಇಲ್ಲಿಗೆ ಬಂದಾಗ ನೀನೇ ಅದನ್ನೆಲ್ಲ ಸರ್‌ಗೆ ಹೇಳು" ಅಂದು, "ನನ್ನ ಮಗಳಿಗೊಂದು ಹೆಸರು ಕೊಡೋ" ಅಂದರು. ನಾನು ತಟ್ಟನೇ ಆಸೆಗಣ್ಣಾಗಿ, "ನೀಹಾರಿಕಾ" ಅಂದೆ, "ಉದ್ದದ್ದು ಬೇಡ ಕಣೋ" ಅಂದರು, "ನಿಹಾರ್" ಅಂದೆ, ಮತ್ತೆ "ಎರಡೇ ಎರಡಕ್ಷರದ್ದು ಹೇಳೋ" ಅಂದರು, ನಾನು ಪಟ್ಟು ಬಿಡದೇ, "ನೇಹಾ" ಅಂದೆ. ಅವರು "ಸರಿ, ನೋಡೋಣ" ಅಂತ ಫೋನ್ ಇಟ್ಟರು.

ಇವರೆಷ್ಟು ಹಗುರ ಸ್ವಭಾವದವರೋ, 'ಸರ್' ಕೆಲಸ–ಕಾರ್ಯಗಳಲ್ಲಿ ಅಷ್ಟೇ ಕಟ್ಟುನಿಟ್ಟು. ಒಂದು ದಿನ ಮೂರುಗಂಟೆಗೇ ಮನೆಗೆ ವಾಪಸ್ಸು ಬಂದ ಮೇಡಂನನ್ನು "ಏನು, ಇಷ್ಟು ಬೇಗ ಬಂದದ್ದು?" ಅಂತಾ ಕೇಳಿದರಂತೆ. "ಪಕ್ಕದೂರಿಗೆ ಏನೋ ಡೆಪ್ಯುಟೇಶನ್ ಡ್ಯೂಟಿಗೆ ಹಾಕಿದ್ದರು. ಮದ್ಯಾಹ್ನ ಊಟಮಾಡಿ, ಸೈನು ಮಾಡಿ ಬಂದುಬಿಟ್ಟೆ" ಅಂದಾಗ, "ಏನ್ ಮೇಡಂ, ಸರ್ಕಾರದ ಕೆಲಸದಲ್ಲಿ ಹೀಗೆಲ್ಲ ಮೈಗಳ್ಳತನ ಮಾಡೋದೇ? ತಪ್ಪು ತಪ್ಪು!" ಅಂತಾ ಎರಡು ದಿನವೆಲ್ಲ ಮರುಗಿದ್ದರಂತೆ. ಈಗಲೂ, ಮನೆಗೆ ಬಂದ ಮೇಲೆ ಪಠ್ಯ ಪುಸ್ತಕಗಳನ್ನೇ ಮುಟ್ಟದ ಮೇಡಂನ ಕಂಡು "ಲೆಸನ್ ಪ್ಲಾನ್ ರೆಡಿ ಮಾಡಿಕೊಳ್ದೇ, ಪ್ರಿಪರೇಶನ್ ಮಾಡಿಕೊಳ್ದೇ ಪಾಠ ಮಾಡ್ಲಿಕ್ಕಾದ್ರೂ ಮನಸ್ಸು ಹೇಗೆ ಬರುತ್ತೆ ಮೇಡಂ?" ಹಳಹಳಿಸಿಕೊಳ್ಳುತ್ತಾರೆ. ಅವರ ದಿನಚರಿ, ಊಟ, ನಿದ್ದೆ, ಕೆಲಸ ಎಲ್ಲವೂ ಕರಾರುವಕ್ಕು. ಇಂಥಾ 'ಸರ್' ಕಂಡರೆ ಚೆಂಗಲು ಹೊಡೆಯುವ ನನ್ನ ಸ್ನೇಹಿತೆಗೂ ಮತ್ತು ಮೇಡಂನ ಇತರ ಸಹೋದ್ಯೋಗಿಗಳಿಗೂ ಭಯ. ಸರ್ ಹತ್ತಿರ ನಾವು ಏನು ಮಾತನಾಡಿ, ಹೇಗೆ ಸಿಕ್ಕಿ ಬೀಳ್ತೀವೋ ಅನ್ನೋ ಹೆದರಿಕೆ. ಹಾಗಾಗಿ ನಾನೇ ಮಾತನಾಡಬೇಕು ಎಂದುಕೊಂಡೆ.

ಕೊನೆಗೂ ಒಂದು ವಾರಾಂತ್ಯದಲ್ಲಿ ಬಿಡುವು ಮಾಡಿಕೊಂಡು ಹೋದಾಗ ತಯಾರು ಮಾಡಿದ್ದ ಸಿಡಿಯನ್ನೂ, ಪದ್ಯ ಸಾಹಿತ್ಯವಿದ್ದ ನೋಟ್ ಬುಕ್ಕನ್ನೂ ಮೇಡಂಗೆ ಕೊಟ್ಟು, "ನೆಕ್ಸ್ಟ್ ಸರ್ತಿ ಬರೋಹೊತ್ತಿಗೆ ಇವೆಲ್ಲ ಹಾಡುಗಳನ್ನೂ ಹಾಡಿ ತೋರಿಸಬೇಕು" ಅಂದೆ. ಅವರು ಗಹಗಹಿಸಿ ನಕ್ಕು, "ಹ್ಯಾಗ್ ಮಾಡೋದೋ, ಈಗ್ ಬೇರೆ 'ಖುಷಿ' ಬಂದಿದಾಳೆ" ಅಂದರು. ನನ್ನೆಲ್ಲ ಹೆಸರಿನ ಆಯ್ಕೆಗಳೂ ಕಸದ ಬುಟ್ಟಿ ಸೇರಿ ಅವರ ಮಗಳು 'ಖುಷಿ'ಯಾಗಿದ್ದಳು! ಅವರ ಮನೆಗೆ–ಮನಕ್ಕೆ ತಂದ ಒಂದೇ ತಿಂಗಳ 'ಖುಷಿ', ಸೀರೆಯೊಂದರ ಜೋಳಿಗೆಯೊಳಗೆ ಕೈಕಾಲು ಮುದುರಿಕೊಂಡು ನಿದ್ದೆ ಹೋಗಿದ್ದಳು. ನಾನೂ, ನನ್ನ ಸ್ನೇಹಿತೆಯೂ, ಅವಳ ಸ್ನೇಹಿತೆಯರೂ ಹೋಗಿ 'ಖುಷಿ'ಯನ್ನು ಮಲಗಬಿಡದೇ ಮೇಡಂನ ಹಾಹಾಕಾರ, ಗದರಿಸುವಿಕೆಯ ನಡುವೆಯೇ ಕೀಟಲೆ ಕೊಟ್ಟು ಎಬ್ಬಿಸಿದೆವು. ಖುಷಿ ಎದ್ದವಳು, ಸುಮ್ಮನೇ ನಮ್ಮನ್ನೆಲ್ಲ ನೋಡಿ ಮೈಮುರಿದಳು, ಪುಟ್ಟ ತುಟಿಯ ಬೊಚ್ಚುಬಾಯರಳಿಸಿ ಆಕಳಿಸಿದಳು. ನನ್ನ ಸ್ನೇಹಿತೆ ನನ್ನನ್ನು ತಿವಿದಳು, "ಇದಕ್ಕೂ ಸಿಸ್ಟಮ್ ಕಲಿಸಿಬಿಟ್ಟಿದಾರೆ ಕಣೋ! ಯಾವ್ದಕ್ಕೂ ಅಳೋಲ್ಲ. ಸುಮ್ಮನಿರ್ತಾಳೆ, ಆಟ ಆಡ್ಸಿದ್ರೆ ಆಟ ಆಡ್ತಾಳೆ, ಇಲ್ದಿದ್ರೆ ಮೇಡಂನ ಸಂಗೀತದ ಗಲಾಟೆಯ ಸೌಂಡ್ ಎಷ್ಟಿದ್ರೂ ಸರಿ, ಸುಮ್ಮನೆ ಮೈಮರೆತು ನಿದ್ದೆ ಮಾಡಿಬಿಡ್ತಾಳೆ!". ನಾನು ಖುಷಿಯ ಮೃದು–ಮೃದುಲ ಉಬ್ಬು ಹೊಟ್ಟೆಯ ಮೇಲೆ ಬೆರಳಾಡಿಸಿ ಅವಳ ನಗಿಸಿದೆ, ಮುದುಡಿಕೊಂಡ ಪುಟ್ಟ ಪುಟ್ಟ ಕೈಬೆರಳು, ಕಾಲ್ಬೆರಳುಗಳನೆಲ್ಲ ಮೆಲ್ಲನೆ ಬಿಡಿಸಿ ಸವರಿದೆ, ಅವಳ ಕೆನ್ನೆ ಮೂಗು, ಪುಟ್ಟ ತುಟಿಗಳನ್ನೆಲ್ಲ

ಮುಟ್ಟಿ, ಕತ್ತಿನ ಸುತ್ತ ಬೆರಳಾಡಿಸಿ ನಗಿಸಲು ಪ್ರಯತ್ನ ಮಾಡುತ್ತಿದ್ದೆ, ಮೇಡಂ ಬಂದವರೇ ಘಟೀರನೇ ನನ್ನ ಕೈಗೊಂದು ಏಟು ಕೊಟ್ಟರು, "ನಾಚ್ಕೆ ಆಗೋದಿಲ್ಲೋನೋ ಹುಡ್ಗೀರಿಗೆ ಅಲ್ಲೆಲ್ಲ ಮುಟ್ಟೋಕೇ? ನೀವುಗಳೆಲ್ಲ ತುಂಬಾ ಕೆಟ್ಟು ಹೋಗಿದೀರಾ. ನೆಕ್ಸ್ಟ್ ಸರ್ತಿ ಬರೋವಷ್ಟೊತ್ತಿಗೆ ಕಿಟಕಿ–ಬಾಗಿಲಿಗೆಲ್ಲ ಗ್ರಿಲ್ ಹಾಕ್ಸಿರ್ತೀನಿ. ಬಂದ್ರೆ ದೂರದಿಂದ್ಲೇ ನೋಡ್ಬೇಕು ಅಷ್ಟೇ ನನ್ನ ಮಗಳನ್ನ!" ಅಂತಾ ಗಹಗಹಿಸಿ ನಕ್ಕರು. ನನ್ನ ಸ್ನೇಹಿತೆಯೂ ಸುಮ್ಮನಿರದೇ "ನೀವು ಹೀಗೇ ಕಟ್‌ನಿಟ್ ಮಾಡ್ತಾ ಇರಿ, ನಮ್ಮೆಲ್ಲ ಕೆಟ್ಟ ಬುದ್ದೀನೂ ಅವ್ಳಿಗೆ ಕಲಿಸಿಕೊಡ್ತೀವಿ. ಕೊನೆಗೆ ಖುಷಿ – ನಿಮ್ಮ ಮನೆ, ಸರ್, ನಿಮ್ಮ ಸಂಗೀತ ಎಲ್ಲವನ್ನೂ ಬಿಟ್ಟು ಬಾಳೆಹೊನ್ನೂರು ಬಸ್‌ಸ್ಟ್ಯಾಂಡ್ ಎದುರಲ್ಲಿ ಮೈದಾ(!) ಮಂಚೂರಿ, ಪಾನಿಪೂರಿ ಮಾಡ್ತಾನಲ್ಲ, ಅವನೊಟ್ಟಿಗೆ ಓಡಿಹೋಗ್ಬೇಕು ಅಷ್ಟೇ!" ಅಂದಳು. ನಗು ಅಬ್ಬರವಾಗಿ ಹರಿಯಿತು!

ಸರ್ ಮತ್ತು ನಾನು, ಮನೆಯ ಇಬ್ಬರೇ ಗಂಡಸರು ಮಧ್ಯಾಹ್ನ ಊಟಕ್ಕೆ ಕುಳಿತೆವು. ನಾನು ಮೆಲ್ಲನೇ ಮಾತು ತೆಗೆದೆ, "ಸರ್, ಈಗ ಖುಷಿ ಮನೆಗೆ ಬಂದದ್ದಾಗಿದೆ,.." ಅವರು ನನ್ನ ಮಾತು ತುಂಡರಿಸಿ ಖುಷಿಯ ಬಗ್ಗೆ, ಅವಳು ತಂದ ಖುಷಿಯ ಬಗ್ಗೆ ಹರಟಿದರು. ಅವರು ಅಷ್ಟೊಂದು ಹಗುರಾಗಿ ಮಾತನಾಡಿದ್ದನ್ನು ಅದುವರೆಗೂ ನೋಡಿಯೇ ಇರದಿದ್ದ ನನಗೆ ನನ್ನ ಮನಸಿನಲ್ಲಿದ್ದದ್ದನ್ನು ಹೇಳಲು ಧೈರ್ಯ ಬಂತು. "... ಇದೊಂದನ್ನು ಮಾತ್ರ ಎಕ್ಸ್‌ಪೆರಿಮೆಂಟ್ ತರಾ ಮಾಡಬೇಡಿ ಸರ್. ಅವಳು ಅವಳಷ್ಟಕ್ಕೇ ಬೆಳೀಲಿ. ನಿಮ್ಮ ಆದರ್ಶಗಳು, ಮೇಡಂನ ಪ್ರೀತಿ–ಉಢಾಫೆ ಯಾವುವೂ ಅವಳ ಮೇಲೆ ಪ್ರಭಾವ ಬೀರದೇ ಇರಲಿ. ಗುಲಾಬಿ ಬಳ್ಳಿಯನ್ನು ನೆಟ್ಟು ನೀರು ಗೊಬ್ಬರ ಹಾಕಿ, ಆದ್ರೆ ಅದಕ್ಕೆ ಕೋಲು–ಕವೆ ಕೊಟ್ಟು ಹೀಗೇ ಇಂತಿಷ್ಟೇ ಬೆಳೀಬೇಕು ಅಂತಾ ಮಾತ್ರ ಅನ್ನಬೇಡಿ..." ನಾನು ಶತಮೂರ್ಖನಂತೆ ನನ್ನೊಳಗಿದ್ದದ್ದನ್ನೆಲ್ಲ ಮಾತನಾಡಿಬಿಟ್ಟೆ. ಅವರು ಮೆಲ್ಲನೇ ಮಾತನಾರಂಭಿಸಿ ನನ್ನ ಸಣ್ಣ ಯೋಚನೆಯನ್ನು ಎತ್ತಿ ತೋರಿದರು, ನನ್ನ ಸಂಶಯಗಳನ್ನೆಲ್ಲ ಒಂದೇ ಏಟಿಗೆ ತೊಡೆದು ಹಾಕಿದರು. "ಇಲ್ಲ ಶಿವೂ ನನಗೇನು ಅವಳು ಹೀಗೇ ಬೆಳಿಬೇಕು, ಇದೇ ತರಾ ಇರಬೇಕು, ನನ್ನ ಆದರ್ಶಗಳನ್ನೆಲ್ಲ ಮುಂದುವರಿಸ್ಕೊಳ್ಳಬೇಕು, ಮುಂದೆ ಹೀಗೇ ಆಗಬೇಕು ಎನ್ನುವಂತ ಸ್ವಾರ್ಥವೇನೂ ಇಲ್ಲ. ಅವಳು ಅವಳಿಗಿಷ್ಟ ಬಂದ ಹಾಗೆ ಬೆಳೆಯಲಿ, ಪೋಷಿಸುವುದಷ್ಟೇ ನನ್ನ ಕೆಲಸ!"

ಆಗ ನನ್ನ ಮಂಕುಬುದ್ದಿಗೆ ಅವರ ಮತ್ತು ಮೇಡಂನ ಸಹಬಾಳ್ವೆಯ ರಹಸ್ಯದ ಹೊಳಹು ಹೊಳೆಯಿತು. ಅವರು ಅಷ್ಟೊಂದೆಲ್ಲ ಆದರ್ಶವಾದಿಗಳಾಗಿದ್ದರೂ ಅದು ಸ್ವಂತಕ್ಕೆ ಮಾತ್ರ. ಪ್ರತಿಯೊಬ್ಬರೂ ತಂತಮ್ಮ ಇಷ್ಟಾನಿಷ್ಟದಂತೆ ಬದುಕಲಿ ಎಂಬ ಉದಾರ ನಿಲುವು ಅವರದ್ದು! ಹಾಗಾಗಿಯೇ ಮೇಡಂ ಮದುವೆಯಾಗಿ ಮನೆಗೆ ಬಂದಾಗ, ಮೇಡಂನ ನಗು, ಗೇಲಿ, ಸಂಗೀತ, ಸ್ನೇಹವೆಲ್ಲ ಅವರದ್ದು, ಅನೇಕರಿಗೆ ಸ್ಕಾಲರ್‌ಶಿಪ್‌ನಂತೆ ತಿಂಗಳಾ ತಿಂಗಳಾ ದುಡ್ಡು ಕೊಟ್ಟು ಓದಿಸುತ್ತಿರುವ ಆದರ್ಶಗಳೆಲ್ಲ ನನ್ನವು ಎಂದು ಸರಿಯಾಗೇ ಅರ್ಥಮಾಡಿಕೊಂಡಿದ್ದರು. ಬೆಟ್ಟವಾಗಿ ಬೆಳೆದು ಹಲವು ಹತ್ತು ಹವ್ಯಾಸಗಳನ್ನು ಹಚ್ಚಿಕೊಂಡಿದ್ದ ಹೆಂಡತಿಯೊಳಗೆ ನಿರ್ಝರಿಯಾದರು. ಬೆಟ್ಟವಿಲ್ಲದೇ ನಿರ್ಝರಿ ಬಯಲಲ್ಲಿ ಹರಿದಿದ್ದರೆ ಒಣಗಿ ಹೋಗುತ್ತಿರಲಿಲ್ಲವೇ? ಹಾಗೇ ಮೇಡಂ ಇಲ್ಲದಿದ್ದರೆ, ಇಂಟವ್ರ್ಯೂ ಮದುವೆಯಾಗದಿದ್ದರೆ 'ಸರ್'ರ ಬದುಕು ಹಸನಾಗುತ್ತಿತ್ತೇ? ಹಾಗೇ ನಿರ್ಝರಿಯಂತೆ ತನ್ನಿಂತಾನು ಹರಿದುಕೊಂಡು ಸಂತೋಷದಿಂದಿರುವ ಸರ್ ಇಲ್ಲದಿದ್ದರೇ ಬೆಟ್ಟ ಬರಡಾಗುತ್ತಿರಲಿಲ್ಲವೇ? ಮೇಡಂ ಮದುವೆಯಾಗಿ ಇಷ್ಟೆಲ್ಲ ಹವ್ಯಾಸ, ನಗು ಎಲ್ಲವನ್ನೂ ಅನುಭವಿಸಲಾಗುತ್ತಿತ್ತೇ?

ನಮ್ಮೆಲ್ಲರನ್ನು ಕಂಡರೆ ಅವರಿಬ್ಬರಿಗೂ ಬಹಳ ಪ್ರೀತಿ. ಹಾಗಾಗಿಯೇ ನಾವೆಲ್ಲ ಮನೆಗೆ ಬಂದಿಳಿದರೆ ಅವರಿಗೆ ಎಲ್ಲಿಲ್ಲದ ಸಂತೋಷ! ತಾವಿಬ್ಬರು ಗಂಡಹೆಂಡತಿ ಊಟತಿಂಡಿಯ ವಿಷಯದಲ್ಲಿ ಎಷ್ಟೇ ಕಟ್ಟುನಿಟ್ಟಾಗಿದ್ದರೂ ಬಂದವರಿಗೆ ಷೋಡಶೋಪಚಾರವಾಗಲೇಬೇಕು!

ಊಟದ ನಂತರ ಹಜಾರದಲ್ಲಿ ಟೀವಿ ಮುಂದೆ ನಮ್ಮನ್ನೆಲ್ಲ ಗೇಲಿ ಮಾಡಿಕೊಳ್ಳುತ್ತ ನಗಲು ಬಿಟ್ಟು ಸರ್ ಬೇರೊಂದು ರೂಮಿಗೆ ವರ್ಗವಾಗುತ್ತಾರೆ, ಅವರು ಮತ್ತೆ ಮೊನ್ನೆ ಬಾಯಿ ತಪ್ಪಿ 'ಏನೇ' ಅಂತಾ ಮಾತನಾಡಿ, ಬೆಚ್ಚಿಬೀಳಿಸಿದ್ದು, ಮೇಡಂ ಮತ್ತು ನಮ್ಮೆಲ್ಲರ ನಗುವಿಗೆ ಹೊಸ ವಿಷಯವಾಗುತ್ತದೆ. ಎಲ್ಲರಿಗೂ ಮೇಡಂ ಇಟ್ಟಿರುವಂತಹ ಅಡ್ಡ ಹೆಸರುಗಳು, ಆ ಹೆಸರಗಳ ಹಿನ್ನಲೆಗೊಂದಿಷ್ಟು ಕೊಸರು, ನಮ್ಮ ಅಬ್ಬರ, ಹಾಡು, ತಬಲಾದ ತೋಂತನ, ಜೊತೆಗೆ ಎಲ್ಲವನ್ನೂ ಮರೆತು ಅಲ್ಲೇ ಚಾಪೆ ಮೂಲೆಯಲ್ಲಿ ಮಲಗಿ ನಿದ್ದೆ ಹೋಗಿರುವ 'ಖುಷಿ' ಎಲ್ಲವೂ ಮುದನೀಡುತ್ತವೆ.

ಮೊನ್ನೆ ಫೋನ್ ಮಾಡಿದ ಮೇಡಂ ಬಹಳ ಉತ್ಸಾಹದಲ್ಲಿದ್ದರು. "ನನಗೊಂದು ಕಂಪ್ಯೂಟರ್ ತಗೊಳ್ಳಿಕ್ಕಿದೆ ಕಣೋ! ಬೆಂಗಳೂರಿನಲ್ಲಿ ಸೆಕೆಂಡ್ ಹ್ಯಾಂಡ್ ಯಾವ್ದು ಸಿಗೋಲ್ವಾ?" ಅಂತಾ ಕೇಳಿದರು. ಈ ಹೊಸಾ ಉಮೇದಿಗೆ ನಾನು ಅವರದೇ ನಗೆ ನಕ್ಕು "ನಿಮಗೆ ಸೆಕೆಂಡ್‌ಹ್ಯಾಂಡ್ ಕಂಪ್ಯೂಟರ್ ತಂದು ಕೊಟ್ಟರೆ ಪ್ರತೀ ವಾರಾಂತ್ಯಕ್ಕೂ ನಾನು ಸರ್ವೀಸ್ ಎಂಜಿನಿಯರ್ ಆಗಿ

ಬಾಳೆಹೊನ್ನೂರಿಗೆ ಅಲೀಬೇಕಾಗುತ್ತೆ" ಅಂದೆ. ಅವರು ಮಾತು ತಿರುಗಿಸಿ "ಬಂದ್ರೇನಾಯ್ತು? ಹೊಟ್ಟೆ ಬಿರಿಯ ಬೇಯ್ಸಿ ಹಾಕೊಲ್ವಾ? ಬಾ, ಅದಕ್ಕೇನು?" ಅಂದರು. ನಾನು ಗಹಗಹಿಸಿದೆ. ಅವರು ಮಾತು ಮುಂದುವರೆಸಿದರು, "..ಅದೆಲ್ಲ ಸರೀ, ಈ ಸರ್ತಿ ಮಾತ್ರ ನನ್ನ ಮಗಳು ನಿನ್ನಿಂದ ಫುಲ್ ಸೇಫ್!"

"ಯಾಕೆ?"

"ಆಗ್ಲೇ ಮನೆ ಬಾಗಿಲಿಗೆ ಶಟರ್ರು, ಕಿಟಕಿಗಳಿಗೆಲ್ಲ ಗ್ರಿಲ್ಸು ಹಾಕಿಸಿಯಾಗಿದೆ ಗೊತ್ತಾ?"

"ನಾನಾದರೂ ಆದರೆ ಎಷ್ಟೋ ಲಕ್ಕಿ! ಇಲ್ಲದಿದ್ರೆ ನೆನಪಿದೆಯಲ್ಲಾ ನಿಮಗೆ–ಬಾಳೆಹೊನ್ನೂರು ಬಸ್‌ಸ್ಟ್ಯಾಂಡಿನೆದುರಿನ ಪಾನಿಪೂರಿಯವನು..., ಅವನಿಲ್ಲದಿದ್ದರೆ ಅವತ್ತು ನಿಮ್ಮ ಮನೆ ಮುಂದೆ ಬಂದಿದ್ದ ಪ್ಲಾಸ್ಟಿಕ್ ರಿಪೇರಿಯವನು...?"

ನಗು ಆಚೀಚೆಯ ಫೋನುಗಳ ತಮ್ಮಟೆಯೊಡೆಯುವಂತೆ ಹರಿಯಿತು...

## ಹ್ಯಾವ್ ಎ ನೈಸ್ ಡೇ

**ಶಿವಕುಮಾರ ಕೆ. ಎಸ್.    shivu_ks@rediffmail.com**